International Journal of Kannada Research 2017; 3(3): 36-40

International Journal of Kannada Research
www.kannadajournal.com

ISSN: 2454–5813
IJKR 2017; 3(3): 36-40
© 2017 IJKR
www.kannadajournal.com
Received: 10-05-2017
Accepted: 11-06-2017

**Bojamma KN**
Assistant Professor,
SDM College, Ujire,
DK Dist. Karnataka,
India

**Correspondence**
**Bojamma KN**
Assistant Professor,
SDM College, Ujire,
DK Dist. Karnataka,
India

# ಭಾರತದಲ್ಲಿ ಬೌದ್ಧಧರ್ಮದ ಪುನರುಜ್ಜೀವನ ಮತ್ತು ಅಂಬೇಡ್ಕರ್

**Bojamma KN**

"ಧರ್ಮ ಎಂದರೆ ಅಂಬೇಡ್ಕರ್ ದೃಷ್ಟಿಯಲ್ಲಿ ಜಾತ್ಯಾತೀತ ಸರ್ವಸಮಾನತೆಗೆ ಅವಕಾಶಗಳಿರುವ ಸಮಷ್ಟಿ ಬದುಕು. ಧರ್ಮವು ಮಾನವ ಸಂಬಂಧಗಳನ್ನು ಮತ್ತು ಮಾನವನ ಸಾಂಸ್ಕೃತಿಕ ಸಾಮಾಜಿಕ ಮತ್ತು ಆರ್ಥಿಕ ಜೀವನವನ್ನು ನಿರ್ಣಯಿಸುವ ಪ್ರಮುಖ ಮಾನದಂಡವಾಗಿದೆ. ಅದೊಂದು ಸಮಗ್ರ ವ್ಯವಸ್ಥೆಯನ್ನು ರೂಪಿಸುವುದು, ನಿರ್ಣಯಿಸುವುದು. ಧರ್ಮವು – ಪ್ರಗತಿ ಪರವಾಗಿದ್ದರೆ. ಜೀವನ್ಮುಖಿಯಾಗಿದ್ದರೆ ಮನುಷ್ಯನ ಜೀವನದ ಹಕ್ಕುಗಳನ್ನು, ಜವಾಬ್ದಾರಿಗಳನ್ನು, ಕರ್ತವ್ಯಗಳನ್ನು ನಿರ್ಧರಿಸುತ್ತದೆ. ಧರ್ಮವು ಪ್ರಗತಿ ವಿರೋಧಿಯಾಗಿದ್ದರೆ, ಮಾನವ ವಿರೋಧಿಯಾಗಿದ್ದರೆ ಅದು ಕೌರ್ಯಕ್ಕೆ, ತಾರತಮ್ಯಗಳಿಗೆ, ಶೋಷಣೆಗೆ ಅವಕಾಶ ಮಾಡಿಕೊಡುತ್ತದೆ. ಇಂತಹ ಕೆಲಸವನ್ನು ಹಿಂದೂ ಧರ್ಮವು ಮಾಡಿದೆ, ಮಾಡುತ್ತಿದೆ ಎಂಬ ಕಾರಣಕ್ಕೆ ಮಾನವೀಯತೆಯ ಪ್ರತಿಪಾದಕರಾದ ಅಂಬೇಡ್ಕರರು ಹಿಂದೂ ಧರ್ಮವನ್ನು ಟೀಕಿಸಿ, ಹಿಂದೂ ಧರ್ಮವು ಮನುಷ್ಯ ವಿರೋಧಿಯೆಂದು ಮನಗಂಡು ಬೌದ್ಧಧರ್ಮಕ್ಕೆ ಪರಿವರ್ತನೆಯಾದರು".(ಮಹಾದೇವಿ, ಒಡೆಯರ್. ಡಿ. ಹೆಗ್ಗಡೆ, ಧರ್ಮ, ಪುಟ–೦೧)

ಹಿಂದೂ ಧರ್ಮದಲ್ಲಿ ಕೇಂದ್ರೀಕೃತ ವ್ಯವಸ್ಥೆಯಿಲ್ಲ. ಹಿಂದೂ ಧರ್ಮವು ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ತತ್ವಗಳನ್ನು ಅಥವಾ ಸೂತ್ರಗಳನ್ನು ಅಥವಾ ಸಿದ್ಧಾಂತಗಳನ್ನು ಹೊಂದಿಲ್ಲ. ಹಿಂದೂ ಧರ್ಮದ ವೈಶಿಷ್ಟ್ಯವು ಹೀಗಿದೆ. ಕರ್ಮ, ಧರ್ಮ ಮತ್ತು ಮೋಕ್ಷ ಕುರಿತ ವಿಚಾರಗಳು ಜಾತಿ ವ್ಯವಸ್ಥೆಯೊಂದಿಗೆ ನಿಕಟವಾಗಿ ಬೆಸೆದುಕೊಂಡಿದೆ. ಓರ್ವ ವ್ಯಕ್ತಿಯು ಉತ್ತಮ ಕಾರ್ಯಗಳನ್ನು ಮಾಡಿದರೆ, ಆತನು ಮುಂದೆ ಉಚ್ಚಜಾತಿಯಲ್ಲಿ ಮರುಜನ್ಮ ಪಡೆಯುವನೆಂದು ಧರ್ಮ ಸೂತ್ರವು ಹೇಳುತ್ತದೆ. ಮೋಕ್ಷದ ಸ್ವರೂಪ ಮತ್ತು ಅದನ್ನು ಹೇಗೆ ಸಾಧಿಸುವುದು ಎಂಬ ಪ್ರಶ್ನೆಗಳು ಹಿಂದೂಧರ್ಮಕ್ಕೆ ಪ್ರಮುಖವಾಗಿದೆ. ಮೋಕ್ಷವನ್ನು ಸಾಧಿಸುವ ವಿಧಾನಗಳೆಂದರೆ ಜ್ಞಾನ ಸಂಪಾದಿಸುವುದು, ಉತ್ತಮ ಕೆಲಸ ಕಾರ್ಯಗಳನ್ನು ಮಾಡುವುದು, ದೇವರ ಬಗೆಗೆ ಪ್ರೀತಿ ಮತ್ತು ಭಕ್ತಿಯನ್ನು ಪ್ರಕಟಿಸುವುದು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಎಂಬ ಶ್ರೇಣೀಕರಣ ವ್ಯವಸ್ಥೆ ಹಿಂದೂಧರ್ಮದಲ್ಲಿದೆ. ಹಿಂದೂ ಧರ್ಮದ ಆಧಾರ ಸ್ತಂಭವಾದ ಚಾತುರ್ವರ್ಣ ವ್ಯವಸ್ಥೆಯೇ ಅದರ ಹಿಂಸೆ ಮತ್ತು ದಬ್ಬಾಳಿಕೆಗಳ ಮೂಲ ಎಂಬುದು ಅಂಬೇಡ್ಕರ್‌ರವರ ಅಭಿಪ್ರಾಯ. ಹಾಗಾಗಿಯೇ ೧೯೩೦ರಲ್ಲಿ ಗಾಂಧಿ ಜತೆ ನಡೆದ ಚರ್ಚೆಯಲ್ಲಿ 'ಜಾತಿ ಪದ್ಧತಿಯನ್ನು ಬೆಂಬಲಿಸುವ ಎಲ್ಲ ಶಾಸ್ತ್ರ, ಪುರಾಣ ಮತ್ತು ಸ್ಮೃತಿಗಳನ್ನೂ ಕೈಬಿಡುವುದಾದರೆ ನಾನು ಹಿಂದೂವಾಗಿಯೇ ಮುಂದುವರೆಯುತ್ತೇನೆ. ಇಲ್ಲವಾದರೆ ಇಲ್ಲ' ಎಂಬ ಸವಾಲನ್ನು ಒಡ್ಡಿದ್ದರು. ಅಸ್ಪೃಶ್ಯತೆಯು ಹಿಂದೂ ಧರ್ಮದಲ್ಲಿ ಪ್ರತ್ಯೇಕಿಸಲಾಗದ ಅಂಗವಾಗಿದೆ. ಆದುದರಿಂದ ಅಂಬೇಡ್ಕರ್‌ಗೆ ತಮ್ಮ ಲೋಕಕ್ಕಿಂತ ಭಿನ್ನವಾದ ಧರ್ಮವೊಂದರ ಅಗತ್ಯವಿತ್ತು. ಅದು ಸಮಾಜವನ್ನು ಬದಲಾಯಿಸುವ ಮತ್ತು ಹಿಂದುಳಿದ ವರ್ಗಗಳನ್ನು ಸಬಲೀಕರಿಸುವ ಧರ್ಮವಾಗಿರಬೇಕು. ಅಂಬೇಡ್ಕರ್‌ಗೆ ಮಾನವ ಪ್ರೀತಿ, ನ್ಯಾಯ ಮತ್ತು ಸಮಾನತೆ ಈ ಮೌಲ್ಯಗಳ ಬಗೆಗೆ ಆಳವಾದ, ಅಪಾರವಾದ ಬದ್ಧತೆಯಿತ್ತು.

ಅಂಬೇಡ್ಕರ್ ಹಿಂದೂ ಧರ್ಮವನ್ನು ವಿಮರ್ಶಿಸಿದ್ದು, ಪಶ್ಚಿಮ ನಾಗರೀಕತೆಯ ಕೆಲವು ಶ್ರೇಷ್ಠ ಮೌಲ್ಯಗಳ ಹಿನ್ನಲೆಯಲ್ಲಿ. ಸಮಾನತೆ, ಸೋದರತೆ, ಸ್ವಾತಂತ್ರ್ಯಗಳು ಹಿಂದೂಧರ್ಮದಲ್ಲಿ ಇಲ್ಲವೇ ಇಲ್ಲ ಎಂದು ತಮ್ಮ ಚಿಂತನೆಯಲ್ಲಿ ಸಮರ್ಥವಾಗಿ ಸಾಬೀತು ಮಾಡಿದರು. ಬುದ್ಧ ತತ್ವದಲ್ಲಿ ಅಂಬೇಡ್ಕರ್‌ರವರಿಗೆ ಸಮಾನತೆ ಕಂಡಿತ್ತು. ಎಲ್ಲಾ ಗಡಿಗಳನ್ನು ಮೀರುವ ದರ್ಶನ ಬುದ್ಧತ್ವದಲ್ಲಿತ್ತು. ಲೌಕಿಕದ ಆಯ್ಕೆಗಳಲ್ಲಿಯೇ ಮುಕ್ತಿ ಇದೆ ಎಂದು ಬುದ್ಧನ ನೀತಿ ಅಂಬೇಡ್ಕರಿಗೆ ಮಾದರಿಯಾಯಿತು. ಬುದ್ಧತತ್ವವು ನಿರಾತಂಕವಾದ ಮಾನವ ಪ್ರೇಮದ ಸ್ವಚ್ಛ ವ್ಯಕ್ತಿತ್ವದ ವೈಚಾರಿಕ ನೀತಿಯನ್ನು

ಅನುಸರಿಸಲು ಒತ್ತಾಯಿಸುತ್ತದೆ ಮತ್ತು ಅದು ಅರಾಜಕತೆಯನ್ನು ಒಪ್ಪುವುದಿಲ್ಲ. ಸಾಮಾಜಿಕ ವ್ಯವಸ್ಥೆಯು ಮಾನವೀಕರಣಗೊಳ್ಳುತ್ತಲೇ ಸಾಗಬೇಕು ಮತ್ತು ಅದು ತನ್ನ ನೈತಿಕತೆಯನ್ನು ಎಂದಿಗೂ ಉಳಿಸಿಕೊಳ್ಳಬೇಕು ಎಂಬುದನ್ನು ಬುದ್ಧನ ಚಿಂತನೆಗಳು ಮಂಡಿಸಿವೆ. ಬೌದ್ಧಧರ್ಮವು ಮಾನವೀಯತೆಯ ನೆಲೆಗಟ್ಟಿನಲ್ಲಿ ಚಿಂತನೆ ಮಾಡುವ ಉತ್ಕೃಷ್ಟ ಧರ್ಮವೆಂಬುದು ಅಂಬೇಡ್ಕರವರ ನಿಲುವು. ಸಮಾನತೆಯನ್ನು ಅನುಭವಿಸಲು ಸ್ವಾತಂತ್ರ್ಯ ಮತ್ತು ಭ್ರಾತೃತ್ವಗಳು ನಮಗೆ ಬೇಕು ಎಂಬುದು ಅಂಬೇಡ್ಕರವರ ಅಭಿಪ್ರಾಯ. ಸಮಾಜದಲ್ಲಿ ಮನುಷ್ಯ ಮತ್ತೊಬ್ಬ ಮನುಷ್ಯನ್ನು ಹೇಗೆ ಪ್ರೀತಿಸಬೇಕು, ಗೌರವಿಸಬೇಕು ಮನುಷ್ಯ ಮನುಷ್ಯನನ್ನಾಗಿ ಹೇಗೆ ಕಾಣಬೇಕು ಎಂಬುದನ್ನು ಚಿಂತಿಸಿದವನು ಬುದ್ಧ. ಆ ಕಾರಣಕ್ಕಾಗಿಯೇ ಅಂಬೇಡ್ಕರ್ ಬೌದ್ಧಧರ್ಮವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಬೌದ್ಧಧರ್ಮವನ್ನು ಒಪ್ಪಿಕೊಳ್ಳಲು ಅಂಬೇಡ್ಕರವರಿದ್ದ ಕಾರಣಗಳನ್ನು ನಟರಾಜ ಹುಳಿಯಾರ್ ಅವರು ತಮ್ಮ 'ಬಾಬಾಸಾಹೇಬರ ಜ್ಞಾನೋದಯ ಮತ್ತು ಅನಂತರ' ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ. "೧) ಉದಾರವಾದಿ ಪ್ರಜಾಪ್ರಭುತ್ವ, ಮಾನವತಾವಾದ, ವೈಜ್ಞಾನಿಕತೆ ಹಾಗೂ ವಿಚಾರವಾದಗಳನ್ನು ಒಪ್ಪುವ ಆಧುನಿಕ ಮನಸ್ಸಿಗೆ ಬೌದ್ಧಧಮ್ಮ ಒಪ್ಪಿತವಾಗುತ್ತದೆ.

೨)ಸ್ವಾತಂತ್ರ್ಯ, ಸಮಾನತೆ ಹಾಗು ಸೋದರತೆಗಳ ತತ್ವವನ್ನು ಈ ಧರ್ಮ ಪ್ರತಿಪಾದಿಸುತ್ತದೆ.

೩)ಧರ್ಮದ ಹೆಸರಿನಲ್ಲಿ ಅನಿಷ್ಟವಾದ ಆಚರಣೆಗಳನ್ನು ಬೌದ್ಧಧರ್ಮ ಒಪ್ಪುವುದಿಲ್ಲ.

೪)ಬೌದ್ಧಧಮ್ಮ ಜಾತಿಯ ಮೇಲು, ಕೀಳುಗಳನ್ನು ತಿರಸ್ಕರಿಸುತ್ತದೆ.

೫)ಈ ಧಮ್ಮದ ಮಾರ್ಗಗಳನ್ನು ಪ್ರಶ್ನಿಸುವ, ವಿವರಣೆಯ ಮೂಲಕ ಅದಕ್ಕೆ ತಿದ್ದುಪಡಿ ತರುವ ಸ್ವಾತಂತ್ರ್ಯ ಧರ್ಮದ ಅನುಯಾಯಿಗೆ ಇದೆ.

೬)ಧರ್ಮಗಳು ಸಾಮಾನ್ಯವಾಗಿ ಪವಾಡಗಳು, ಅಲೌಕಿಕ ಘಟನೆಗಳು ಹಾಗೂ ಅಲೌಕಿದ ಶಕ್ತಿಗಳ ಸುತ್ತ ಕಟ್ಟಿದ ಸುಳ್ಳುಗಳ ಮೂಲಕ ಜನರ ಮೇಲೆ ಯಜಮಾನಿಕೆ ಸ್ಥಾಪಿಸುತ್ತಿರುತ್ತವೆ. ಹಿಂದೂ ಧರ್ಮ ಹೆಚ್ಚಾಗಿ ಈ ಬಗೆಯಲ್ಲೇ ಜನಸಮುದಾಯವನ್ನು ನಿಯಂತ್ರಿಸುತ್ತಾ ಬಂದಿದೆ. ಈ ದೃಷ್ಟಿಯಿಂದ ನೋಡಿದಾಗ, ಬೌದ್ಧ ಧಮ್ಮದಲ್ಲಿ ಪವಾಡಗಳಾಗಲೀ, ಅಲೌಕಿಕವಾದ ದೈವದ ಕಲ್ಪನೆಯಾಗಲೀ ಇಲ್ಲ. ಬೌದ್ಧ ಧಾರ್ಮಿಕ ನಾಯಕರಲ್ಲಿ ಅಲೌಕಿದ ಶಕ್ತಿಯಿದೆಯೆಂದು ಬೌದ್ಧ ಧಮ್ಮ ಬಯಸುವುದಿಲ್ಲ".

ಬುದ್ಧ ದೇವರು, ಆತ್ಮ, ಸ್ವರ್ಗ,ಯಾವುದು ಇಲ್ಲ ಎಂದ. ಅವನು ಬೋಧಿಸಿದ್ದು ಜೀವನ ಮಾರ್ಗವನ್ನು ಮತ್ತು ಬದುಕುವ ರೀತಿಯನ್ನು. ಅವನು ನಂಬಿಕೆಯ ಮಾರ್ಗವನ್ನು ಬೋಧಿಸಲಿಲ್ಲ, ಅವನ ಬೋಧನೆ ವೈಜ್ಞಾನಿಕವಾದದ್ದು, ಅನುಭವ ಜನ್ಯವಾದದ್ದು, ಪ್ರಯೋಗ ಪರೀಕ್ಷೆಗಳನ್ನು ಅವಲಂಬಿಸಿದ್ದು. ಆತ ತತ್ವಶಾಸ್ತ್ರಗಳನ್ನು ಅವಲಂಬಿಸಿದವನಲ್ಲ ಅವನು ವಾಸ್ತವವಾದಿ ಬದುಕಿಗೆ ಹತ್ತಿರವಾದವನು. ವೈಜ್ಞಾನಿಕ, ವೈಚಾರಿಕ, ವಸ್ತುನಿಷ್ಠ ನೆಲೆಯಲ್ಲಿ ಹುಟ್ಟಿಕೊಂಡ ಈ ಧರ್ಮ ಅಂಬೇಡ್ಕರಿಗೆ ಆಪ್ತವಾಗುತ್ತದೆ.

ಅಂಬೇಡ್ಕರರಿಗೆ ಬೌದ್ಧಧರ್ಮ ಎನ್ನುವುದು ತಮ್ಮ ಹೋರಾಟಕ್ಕೆ ಸಿಕ್ಕಿದ ಚಾರಿತ್ರಿಕ ಸಮರ್ಥನೆ. ಚಾರಿತ್ರಿಕವಾದ ಸ್ಥಿತಿಯೊಂದನ್ನು ವರ್ತಮಾನಕ್ಕೆ ತರುವ ಮೂಲಕ ತಮ್ಮ ಹೋರಾಟಕ್ಕೆ ದೊಡ್ಡ ಪರಂಪರೆಯನ್ನು ನಿರ್ಮಿಸಿಕೊಳ್ಳುವ ಪ್ರಯತ್ನವಾಗಿ ಡಿಸೆಂಬರ್ ೨೫, ೧೯೨೭ರಂದು ಮಹದ್ ನಗರದಲ್ಲಿ ಮನು ಧರ್ಮಶಾಸ್ತ್ರವನ್ನು ಸಾರ್ವಜನಿಕವಾಗಿ ಅಗ್ನಿಗಾಹುತಿ ಮಾಡಿದರು. ೧೯೩೫ರಲ್ಲಿ ಒಂದು ಅಮೋಘ ಪ್ರತಿಜ್ಞೆಯನ್ನು ಕೈಗೊಂಡರು ಅದೇನೆಂದರೆ 'ಇತಚುಟಿ ಣುಡಿಹಾ ಖ ಚಿಟ ಚಿ ಉಣುಟಿಜಣ ಛಿಹಿಡಿಟಿ ಖ ತಿಹುಟ ಟಿಡಿಹಾ ಜುಜ ಚಿ ಉಣುಟಿಜಣ'. ಅಂಬೇಡ್ಕರರಿಗೆ ಆದ ದುಃಖ, ಅವಮಾನ, ಅಧ್ಯಯನ ಹುಡುಕಾಟ ಹಾಗೂ ಸಂಘರ್ಷಗಳಿಂದ ಹುಟ್ಟಿದ ಜ್ಞಾನೋದಯ ಭಾರತದ ಚರಿತ್ರೆಯ ದಿಕ್ಕನ್ನೇ ಬದಲಿಸಿತು. ಹಿಂದೂ ಧರ್ಮವನ್ನು ಜಾತಿಯ ಮನಸ್ಸನ್ನು ಬದಲಾಯಿಸಬಹುದೇ ಎಂದು ಚರ್ಚೆ, ವಿಮರ್ಶೆ, ಹೋರಾಟ ಹಾಗೂ ಸಂವಿಧಾನಗಳ ಮೂಲಕ ಸತತವಾಗಿ ಪ್ರಯತ್ನಿಸಿದರು. ಅಂಬೇಡ್ಕರ್ ತನ್ನ ಭಗ್ನಗೊಂಡ ಸಮುದಾಯಗಳ ಬಿಡಿ ಅನನ್ಯತೆಯನ್ನು ಸಂವಿಧಾನದ ಕಕ್ಷೆಯ ಮೂಲಕ ಒಂದು ಮಾಡಲು ತೊಡಗಿದರು. ಇಡೀ ಸಂವಿಧಾನದ ತಿರುಳು ಬುದ್ಧತತ್ವವೇ ಆಗಿದೆ. ಅಪರಿಮಿತ ಆಯ್ಕೆ ಮತ್ತು ಸ್ವಾತಂತ್ರ್ಯಗಳ ಕಡೆಗೆ ಸಮಾಜ ವಿಕಾಸವಾಗಬೇಕು ಎಂಬುದು ಸಂವಿಧಾನದ ಮೂಲ ಆಶಯ. ಜಾತಿನಿಷ್ಠ ಸಮಾಜವು ಆಂತರಿಕ ಮತ್ತು ಅಪ್ರಮಾಣಿಕತೆಯಲ್ಲಿ ಸದಾ ಸಂಘರ್ಷದಲ್ಲಿರುತ್ತದೆ, ಇದು ಅಭಿವೃದ್ಧಿಗೆ ಮಾರಕ. ಅಂಬೇಡ್ಕರ್ ಹಿಂದೂ ಧರ್ಮವನ್ನು ತಿರಸ್ಕರಿಸಿ ಬೌದ್ಧಧರ್ಮಕ್ಕೆ ವಾಲಿದ್ದು ದಲಿತ ಜನರ ವಿಮೋಚನೆಗಾಗಿಯೇ ಆ ಸಂದರ್ಭದಲ್ಲಿ ಒಂದು ಪ್ರತಿಜ್ಞೆಯನ್ನು ಮಾಡಿದ್ದರು. 'ನಾನಾವ ಜನಾಂಗದಲ್ಲಿ ಜನಿಸಿದೆನೋ, ಆ ವರ್ಗದ ಇಡೀ ಜನಾಂಗವನ್ನು ವಂಶಪಾರಂಪರಿಕವಾದ ಭಯಾನಕ ಅನ್ಯಾಯ, ಅನೈತಿಕ ಕ್ರೌರ್ಯಗಳಿಂದ ವಿಮೋಚನೆಗೊಳಿಸಲು ವಿಫಲನಾದಲ್ಲಿ ಸ್ವಯಂ ಗುಂಡು ಹಾರಿಸಿಕೊಂಡು ಅಸು ನೀಗುತ್ತೇನೆ' ಎಂಬುದಾಗಿ. ದಲಿತ ಸಮುದಾಯಗಳು ಸಾಂಸ್ಕೃತಿಕವಾಗಿ ಬುದ್ಧನ ಧ್ಯಾನದಲ್ಲೇ ಸಾಗಬೇಕು, ಬುದ್ಧಧರ್ಮದ ಕಡೆಗೆ ದಲಿತರು ಮತಾಂತರವಾಗುವುದೇ ಎಲ್ಲಾ ಸಾಮಾಜಿಕ ಅನಿಷ್ಠಗಳಿಗೂ ಮದ್ದು ಎಂದು ಅಂಬೇಡ್ಕರರು ಭಾವಿಸಿದ್ದರು.

ಅಂಬೇಡ್ಕರರು ತಮ್ಮ ಜೀವನದ ಕೊನೆಯ ಹಂತದಲ್ಲಿ ಬೌದ್ಧ ಮತದ ಪತಾಕೆಯನ್ನೆತ್ತಿ ಹಿಡಿದು, ಭಾರತದಿಂದ ಉಚ್ಛಾಟನೆಗೊಂಡಿದ್ದ ಬುದ್ಧನನ್ನು ಮರಳಿ ಅವನ ಮಾತೃಭೂಮಿಗೆ ಕರೆತರುವ ಮಹಾ ನಿರ್ಧಾರವನ್ನು ಮಾಡಿದರು. ೧೯೫೦ ರಲ್ಲಿ ಬುದ್ಧಜಯಂತಿಯ ಸಂದರ್ಭದ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಬುದ್ಧನ ಧರ್ಮ ನೀತಿಯ ಮೇಲೆ ಆಧಾರಿತವಾಗಿದೆಯೆಂದು ಹೇಳಿದರು. ಬುದ್ಧನು ಮಾರ್ಗದರ್ಶಿಯಾಗಿ ಕಾರ್ಯ ಮಾಡಿದವನೇ ಹೊರತು ದೇವನಂತಲ್ಲ. ಕೃಷ್ಣ ತಾನು ದೇವರದೇವನೆಂದೂ, ಕ್ರಿಸ್ತನು ತಾನು ದೇವರ ಮಗನೆಂದೂ ಮತ್ತು ಮಹಮ್ಮದ್ ಪೈಗಂಬರನು ತಾನೇ ಕೊನೆಯ ದೇವದೂತನೆಂದನು. ಬುದ್ಧನ ಹೊರತು ಮಿಕ್ಕ ಎಲ್ಲಾ ಮತ ಸಂಸ್ಥಾಪಕರೂ ಮೋಕ್ಷದಾತ (ರಕ್ಷಕ) ಪಾತ್ರವನ್ನು ತಾವು ವಹಿಸಿದವರೆಂದು ಹೇಳಿಕೊಂಡರು. ಬುದ್ಧನಾದರೋ ಮಾರ್ಗದಾತನ ಪಾತ್ರದಿಂದ ತೃಪ್ತನಾದನು. ಬೌದ್ಧಧರ್ಮದಲ್ಲಿ ನೀತಿಯಿದೆ ಬುದ್ಧನು 'ಧರ್ಮ' ಎಂಬ ಪದಕ್ಕೆ ಬಹುಕ್ರಾಂತಿಕಾರಿ ಅರ್ಥವನ್ನು ಪ್ರತಿಪಾದಿಸಿದನು. ಧರ್ಮವು ಬ್ರಾಹ್ಮಣರ ದೃಷ್ಟಿಯಲ್ಲಿ ಯಜ್ಞ ಮತ್ತು ದೇವರ ಹೆಸರಿನ ತ್ಯಾಗವಾಗಿತ್ತು. ಹಿಂದೂಧರ್ಮ ಅಸಮಾನತೆಯಿಂದ ಕೂಡಿದೆ ಬೌದ್ಧಧರ್ಮ ಸಮಾನತೆಯಲ್ಲಿ ನಂಬಿಕೆ ಇಟ್ಟಿದೆ. ಗೀತೆಯು ಚಾತುರ್ವರ್ಣ್ಯವನ್ನು ಎತ್ತಿ ಹಿಡಿಯಿತು ಎಂಬುದಾಗಿ ಹೇಳಿದರು.

ಮಹಾಬೋಧಿ ಸಂಘದ ಪತ್ರಿಕೆಯ ಮೇ ತಿಂಗಳ ಸಂಚಿಕೆಯಲ್ಲಿನ 'ಬುದ್ಧ ಮತ್ತು ಅವನ ಧರ್ಮದ ಭವಿಷ್ಯತ್ತು' ಎಂಬ ತಮ್ಮ ಲೇಖನದಲ್ಲಿ ಬೌದ್ಧ ಧರ್ಮದ ಬಗ್ಗೆ ತಮ್ಮ ಅಭಿಪ್ರಾಯಗಳ ಸಾರಾಂಶವನ್ನು ಹೀಗೆ ಹೇಳಿದ್ದಾರೆ ೧) ಸಮಾಜವು ಏಕ ಘಟಕವಾಗಿರಬೇಕಾದರೆ ಅದು ಕಾನೂನು ಬದ್ಧ ಅಥವಾ ನೀತಿ

ಬದ್ಧ ಆಧಾರವುಳ್ಳದಾಗಿರಬೇಕು. ೨) ಧರ್ಮಕ್ಕೆ ನೀತಿಯ ಸಂಹಿತೆಯಿದ್ದರೆ ಸಾಲದು, ಆ ನೀತಿಯ ಸಂಹಿತೆಯ ಮೂಲಭೂತ ಹಕ್ಕುಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳನ್ನು ಗುರುತಿಸಬೇಕು. ೪) ಧರ್ಮವು ಬಡತನವನ್ನು ಪವಿತ್ರಗೊಳಿಸಬಾರದು ಅಥವಾ ಉದಾತ್ತಗೊಳಿಸಬಾರದು. ಅಂಬೇಡ್ಕರವರ ಬೌದ್ಧಧರ್ಮವು ಈ ಅವಶ್ಯಕತೆಗಳನ್ನು ಪೂರೈಸುತ್ತದೆ ಮತ್ತು ಜಗತ್ತಿನಲ್ಲಿರುವ ಧರ್ಮಗಳೆಲ್ಲೆಲ್ಲಾ ಬೌದ್ಧಧರ್ಮ ಮಾತ್ರ ಇಡೀ ಜಗತ್ತೇ ಹೊಂದಿರಲು ಯೋಗ್ಯವಾದುದು.

ಅಂಬೇಡ್ಕರ್‌ರು ೧೯೫೦ ಮೇ ೨೫ ರಂದು ಕೊಲಂಬೋದಲ್ಲಿ ಬೌದ್ಧಯುವಕ ಸಂಘದ ಪ್ರತಿನಿಧಿಗಳ ಮುಂದೆ 'ಭಾರತದಲ್ಲಿ ಬೌದ್ಧಧರ್ಮದ ಆರೋಹಣ ಮತ್ತು ಅವರೋಹಣ' ಎಂಬ ವಿಷಯದ ಕುರಿತು ಭಾಷಣ ಮಾಡಿದರು. ಭಾರತದಿಂದ ಬೌದ್ಧ ಧರ್ಮವು ಮಾಯವಾಗಿದೆಯೆಂಬ ಎಲ್ಲಾ ಅಭಿಪ್ರಾಯಗಳನ್ನು ನಿರಾಕರಿಸಿ ಅದು ತನ್ನ ಪ್ರಾಪಂಚಿಕ ರೂಪದಲ್ಲಿ ಅದೃಶ್ಯವಾಗಿದೆ. ನಾನು ಒಪ್ಪುತ್ತೇನೆ. ಆದರೆ ಆಧ್ಯಾತ್ಮಿಕ ಶಕ್ತಿಯಾಗಿ ಅದು ಇನ್ನೂ ಅಸ್ತಿತ್ವದಲ್ಲಿದೆ ಎಂದರು. ಹಿಂದೂ ಧರ್ಮದ ಬಗ್ಗೆ ಅವರು ಪ್ರಸ್ತಾಪಿಸುತ್ತಾ ಅದು ವೇದಕಾಲದ, ಧರ್ಮ, ಬ್ರಾಹ್ಮಣ ಮತ್ತು ಹಿಂದುತ್ವವೆಂಬ ತ್ರಿಹಂತಗಳಲ್ಲಿ ಸಂಚರಿಸಿದೆ ಮಾತ್ರವಲ್ಲ ಬ್ರಾಹ್ಮಣತ್ವವು ಅಸಮಾನತೆಯನ್ನು ಉಪದೇಶಿಸಿತು. ಬೌದ್ಧಧರ್ಮವು ಭಾರತದಲ್ಲಿ ಮೃತ್ಯುವಾಯಿತು ಎಂಬುದು ಸತ್ಯವಲ್ಲ, ವಾಸ್ತವವಾಗಿ ಶಂಕರಾಚಾರ್ಯರು ಮತ್ತು ಅವರ ಗುರುಗಳು ಬೌದ್ಧರಾಗಿದ್ದರೆಂದರು. ನಂತರ ಕೊಲಂಬೊ ಪುರಭವನದ ಸಭೆಯೊಂದರಲ್ಲಿ ಭಾಷಣ ಮಾಡಿ ಅಂಬೇಡ್ಕರ್‌ರು ಅಲ್ಲಿಯ ಅಸ್ಪೃಶ್ಯರನ್ನು ಬೌದ್ಧ ಧರ್ಮಕ್ಕೆ ಸೇರಬೇಕೆಂದು ಕೋರಿದರು ಮತ್ತು ನೀವು ಪ್ರತ್ಯೇಕ ವ್ಯವಸ್ಥಿತ ಸಂಸ್ಥೆಯನ್ನು ಹೊಂದುವ ಅವಶ್ಯಕತೆಯಿಲ್ಲವೆಂದು ಹೇಳಿದರು. ಸಿಲೋನಿನ ಬೌದ್ಧರು, ಸಿಲೋನಿನ ದಲಿತವರ್ಗದವರನ್ನು ಅಂಗೀಕರಿಸಿ ಪಿತೃಪ್ರೇಮದಿಂದ ಅವರ ಹಿತವನ್ನು ಕಾಪಾಡಬೇಕೆಂದು ಕೇಳಿಕೊಂಡರು. ೧೯೫೦ ಜುಲೈ ೨೫ರಂದು ಅಂಬೇಡ್ಕರ್‌ರು ರಾಯಲ್ ಏಷ್ಯಾಟಿಕ್ ಸೊಸೈಟಿಯ ಬೊಂಬಾಯಿ ಶಾಲೆಯ ಆಶ್ರಯದಲ್ಲಿ ನಡೆದ ಸಭೆಯೊಂದರಲ್ಲಿ ಭಾಷಣ ಮಾಡಿದರು. ಅದರಲ್ಲಿ ಬಾಲ್ಯದಿಂದ ತಾವು ಬೌದ್ಧಧರ್ಮದಲ್ಲಿ ಅಸಕ್ತರಾಗಿದ್ದವರೆಂದರು. ಸೆಪ್ಟಂಬರ್ ೨೯ರಂದು ವೊರ್ಲಿಯ ಬೌದ್ಧ ದೇವಾಲಯದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡುತ್ತಾ, ದಲಿತರು ತಮ್ಮ ಕಷ್ಟಗಳನ್ನು ಅಂತ್ಯಗೊಳಿಸುವ ಸಲುವಾಗಿ ಬೌದ್ಧಧರ್ಮವನ್ನು ಅವಲಂಬಿಸಬೇಕೆಂದು ಕೋರಿಕೊಂಡರು. ತಮ್ಮ ಜೀವಮಾನದ ಕೊನೆಯ ಭಾಗವನ್ನು ಭಾರತದಲ್ಲಿ ಬೌದ್ಧಧರ್ಮವು ಪುನರುಜ್ಜೀವಿಸಿ ಪ್ರಸಾರವಾಗುವಂತೆ ಮಾಡಲು ವಿನಿಯೋಗಿಸುವುದಾಗಿ ಘೋಷಿಸಿದರು.

ಡಿಸೆಂಬರ್, ೧೯೫೪ರಲ್ಲಿ ಬರ್ಮಾದ ರಂಗೂನಿನಲ್ಲಿ ೪ನೇ ಅಂತಾರಾಷ್ಟ್ರೀಯ ಬೌದ್ಧ ಸಮ್ಮೇಳನ ಜರುಗಿತು. ಡಾ. ಬಿ.ಆರ್. ಅಂಬೇಡ್ಕರ್ ಸಮ್ಮೇಳನದಲ್ಲಿ ಭಾಗವಹಿಸಿ ಭಾಷಣ ಮಾಡಿದರು. ತಮ್ಮ ಭಾಷಣದ ವಿಸ್ತೃತ ರೂಪವನ್ನು ಎರಡು ಭಾಗಗಳ ಜ್ಞಾಪಕ ಪತ್ರವಾಗಿ ಸಿದ್ಧಪಡಿಸಿಕೊಂಡು ಹೋಗಿದ್ದರು. ಮೊದಲನೆಯ ಭಾಗವು ಭಾರತದಲ್ಲಿ ಬೌದ್ಧಧರ್ಮವನ್ನು ಪ್ರಸಾರ ಮಾಡುವುದರ ಕುರಿತು ಇತ್ತು. (ಅದರಲ್ಲಿ ಪ್ರಸ್ತಾಪಿಸಲಾದ ಎರಡು ಅವಶ್ಯಕತೆಗಳನ್ನು ಅಂಬೇಡ್ಕರ್ ಅವರೇ ನಂತರ ಪೂರೈಸಿದರು) ಬುದ್ಧನ ಬೋಧನೆಗಳಿರುವ 'ಬುದ್ಧ ಮತ್ತು ಅವನ ಧರ್ಮ' ಪುಸ್ತಕ ತಯಾರಿಸುವುದು ಹಾಗೂ ಬೌದ್ಧಧರ್ಮಕ್ಕೆ ಮತಾಂತರವಾಗಲು ಒಂದು ಸಮಾರಂಭವನ್ನು ಆಯೋಜಿಸುವುದು. ಎರಡನೆಯ ಭಾಗದಲ್ಲಿ ದಕ್ಷಿಣ ಭಾರತದಲ್ಲಿ ಭಾರತೀಯ ಬೌದ್ಧರ ಸ್ಥಿತಿಗತಿಗಳ ಬಗೆಗೆ ಒಂದು ವರದಿಯನ್ನು ತಯಾರಿಸಿಕೊಂಡಿದ್ದರು. ಬೌದ್ಧ ಸಮ್ಮೇಳನದ ಕೆಲವು ಮಹತ್ವದ ಮಾತುಗಳು ಹೀಗಿವೆ

೧)ನವದೆಹಲಿಯ ರಾಷ್ಟ್ರಪತಿ ಭವನದ ಮುಂಭಾಗದಲ್ಲಿ ಬೌದ್ಧಧರ್ಮದ ಸೂಕ್ತಿಯೊಂದನ್ನು ಹಾಕಿಸಲಾಗಿರುವುದನ್ನು, ಭಾರತವು ಅಶೋಕ ಚಕ್ರವನ್ನು ತನ್ನ ಚಿಹ್ನೆಯೆಂದು ಅಂಗೀಕರಿಸಿರುವುದನ್ನು ತಮ್ಮ ವೈಯಕ್ತಿಕ ಸಾಧನೆ ಎಂದು ತಿಳಿಸಿದರು.

೨)ಮುಂಬಯಿ ಮತ್ತು ಔರಂಗಾಬಾದಿನಲ್ಲಿ ಒಂದೊಂದು ಕಾಲೇಜನ್ನು ಸ್ಥಾಪಿಸಿ, ಸುಮಾರು ೩೪೦೦ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವ ಆ ಸಂಸ್ಥೆಗಳಲ್ಲಿ ಬೌದ್ಧಧರ್ಮ ವ್ಯಾಸಂಗವನ್ನು ಪ್ರೋತ್ಸಾಹಿಸಲಾಗುವುದೆಂದು ನುಡಿದರು.

೩ಬೌದ್ಧಧರ್ಮ ಪ್ರಚಾರಕ್ಕಾಗಿ ನನ್ನನ್ನು ತಾನು ಮೀಸಲಾಗಿಟ್ಟುಕೊಳ್ಳುತ್ತೇನೆಂದು ಅವರು ಘೋಷಿಸಿದರು.

೪)೨೦,೦೦೦ ಮಹಿಳೆಯರು ಸೇರಿದ್ದ ಆ ಸಭೆಯಲ್ಲಿ ಅವರು ಸಾಮಾನ್ಯ ಜನರಿಗೋಸ್ಕರ ಸರಳ ಭಾಷೆಯಲ್ಲಿ ಬೌದ್ಧಧರ್ಮ ತತ್ವಗಳನ್ನು ವಿವರಿಸುವ ಪುಸ್ತಕವೊಂದನ್ನು ಬರೆಯುತ್ತಿರುವುದಾಗಿ ಸಾರಿದರು.

೫)ಪಂಡರಪುರದಲ್ಲಿಯ ವಿಠೋಬ ದೇವರ ವಿಗ್ರಹವು ನಿಜವಾಗಿ ಬುದ್ಧನ ವಿಗ್ರಹವೇ ಆಗಿದೆಯೆಂದು ಅಂಬೇಡ್ಕರ್ ತಮ್ಮ ವಾದವನ್ನು ಮುಂದಿಟ್ಟರು. ಬೌದ್ಧಧರ್ಮದ ಪ್ರಸಾರ ಮತ್ತು ಧ್ಯೇಯದ ಬಗ್ಗೆ ತಮ್ಮ ವಿಚಾರಗಳಿಂದ ಅಭಿಪ್ರಾಯಗಳಿಂದ ಸಮ್ಮೇಳನದಲ್ಲಿರುವವರನ್ನು ಮಂತ್ರ ಮುಗ್ಧಗೊಳಿಸಿದರು. ಕೊನೆಯದಾಗಿ ಬರ್ಮಾ ಮತ್ತು ಸಿಲೋನಿನ ಬೌದ್ಧರು ಹಣವನ್ನು ಇತರ ದೇಶಗಳಲ್ಲಿ ಬೌದ್ಧಧರ್ಮದ ಪ್ರಚಾರ ಮತ್ತು ಪುನರುಜ್ಜೀವನಕ್ಕಾಗಿ ವ್ಯಯಮಾಡಬೇಕೆಂದರು.

ಭಾರತಕ್ಕೆ ಹಿಂತಿರುಗಿದ ಮೇಲೆ ರಂಗೂನಿನಿಂದ ತಂದ ಬುದ್ಧನ ಪ್ರತಿಮೆಯನ್ನು ಪೂನಾದ ಬಳಿಯ ದೇಹುರೋಡ್ ಎಂಬಲ್ಲಿ ಹೊಸದಾಗಿ ಕಟ್ಟಲಾದ ಬುದ್ಧವಿಹಾರದಲ್ಲಿ ಅನಾವರಣವನ್ನು ಮಾಡಿದರು.

ಅಂಬೇಡ್ಕರ್‌ರವರು ಬೌದ್ಧಮತ ಪ್ರಸಾರ ಚಳುವಳಿಯನ್ನು ಅಧಿಕಗೊಳಿಸಿಕೊಂಡರು ಡಿ. ವಾಲಿನ್‌ಸಿನ್ಹಾರವರಿಗೆ ಪತ್ರ ಬರೆದು 'ಧರ್ಮದೀಕ್ಷಾ ಸಮಾರಂಭ' ಎಂಬ ವ್ರತಸೂತ್ರವನ್ನು ಬೌದ್ಧಧರ್ಮವನ್ನು ಅಂಗೀಕರಿಸುವರೆಲ್ಲರೂ ಅನುಸರಿಸಲಿಕ್ಕಾಗಿ ರಚಿಸಿದ್ದೇನೆಂದು ತಿಳಿಸಿದರು. ೧೯೫೪ ರಲ್ಲಿ ಬರ್ಮಾದಲ್ಲಿ ಅಂಬೇಡ್ಕರ್‌ರವರು ಮಾಡಿದ ಭಾಷಣದಲ್ಲಿ ಬೌದ್ಧಧರ್ಮವನ್ನು ಭಾರತದೇಶದಲ್ಲಿ ಪ್ರಚಾರ ಮಾಡುವುದಕ್ಕಾಗಿ ಕಾರ್ಯಕರ್ತರನ್ನು ತರಬೇತು ಮಾಡಲು ಬೌದ್ಧ ಕೇಂದ್ರವೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದೆಂದರು. ಅಲ್ಲದೆ ಡಾ. ಅಂಬೇಡ್ಕರ್‌ರವರಿಗೆ ಬೌದ್ಧ ಕಾರ್ಯಗಳಿಗೋಸ್ಕರ ಧನಸಹಾಯ ಮಾಡಲಿದ್ದ ಅಮೆರಿಕಾದ ಮಹಿಳೆಯೊಬ್ಬರು, ಬೆಂಗಳೂರಿನಲ್ಲಿ ಸಾಂಸ್ಕೃತಿಕ ಇತಿಹಾಸ, ತತ್ವಶಾಸ್ತ್ರ ಮತ್ತು ಅದಕ್ಕೆ ಸಂಬಂಧಿಸಿದ ಅಧ್ಯಯನ ಸಂಸ್ಥೆಯನ್ನು ಸ್ಥಾಪಿಸಿದ ಯೋಜನೆಗೆ ಖರ್ಚು ಮಾಡಲು ಬಯಸುತ್ತೀರಾ ಎಂಬುದಾಗಿ ಪತ್ರ ಬರೆದಿದ್ದರು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ೧೯೫೪ ಜೂನ್ ಪ್ರಾರಂಭದಲ್ಲಿ ಬೆಂಗಳೂರಿನಲ್ಲಿ ಅಂಬೇಡ್ಕರ್‌ರವರನ್ನು ಭೇಟಿಯಾದ ಮಹಾರಾಜರು ಐದು ಎಕರೆ ಭೂಮಿಯನ್ನು ಈ ಯೋಜನೆಗೋಸ್ಕರ ನೀಡಿದ್ದರು. ವಿಶ್ವ ಬೌದ್ಧ ಸಮಿತಿ ಮತ್ತು ಬುದ್ಧ ಶಾಸನ ಸಮಿತಿಯವರು ಹಣಕಾಸಿನ ಮತ್ತು ತಾಂತ್ರಿಕ ಸಹಾಯವನ್ನು ಮಾಡುವುದಾಗಿ ಭರವಸೆ ನೀಡಿದ್ದರು.

ಟೋಕಿಯೋದಲ್ಲಿದ್ದ ಡಾ. ಫೆಲಿಕ್ಸ್‌ರವರು ಬೌದ್ಧ ಮತ್ತು ಜೈನ ಧರ್ಮಗಳಿಗೆ ಸಂಬಂಧಪಟ್ಟ ಹಾಗೆ ಭಾರತೀಯ ಅಲೋಚನೆಗಳ ಮೂಲದ ಬಗ್ಗೆ ಏರ್ಪಡಿಸಿದ್ದ ದುಂಡುಮೇಜಿನ ಪರಿಷತ್ತುಗಳಲ್ಲಿ ಅಂಬೇಡ್ಕರವರು ಭಾಗವಹಿಸಬೇಕೆಂದು ಆಶಿಸಿದ್ದರು. ೧೯೫೫ ಅಗಸ್ಟ್ ೫ ರಂದು ಅಂಬೇಡ್ಕರ್‌ರವರನ್ನು ಬೊಂಬಾಯಿಗೆ ಚಿಕಿತ್ಸೆಗಾಗಿ ಕರೆ ತಂದಾಗ, ಅವರು ಪ್ರಧಾನಿ ನೆಹ್ರೂರವರಿಗೆ ಪತ್ರವನ್ನು ಬರೆದು ತಮ್ಮ ಸಂಘಕ್ಕೆ ನಿಧಿ ಶೇಖರಿಸಲು ಸಂದೇಶವನ್ನು ಕಳಿಸಿದ್ದರು. ಬೌದ್ಧ ವಿದ್ವಾಂಸರಾಗಿದ್ದ ಡಾ. ಬಿ.ಜಿ. ಗೋಖಲೆಯವರಿಗೂ ಸಹ ೧೯೫೫ ನವೆಂಬರ್‌ನಲ್ಲಿ ಅಂಬೇಡ್ಕರ್ ಪತ್ರ ಬರೆದು. ಹಣಕಾಸಿನ ಸಹಾಯ ಕೋರಿದ್ದರು. ೧೯೫೬ ಫೆಬ್ರವರಿಯಲ್ಲಿ 'ದೇವರಿಲ್ಲ' 'ಆತ್ಮವೆಂಬುದಿಲ್ಲ' ಎಂದು ಎರಡು ಹೊಸ ಅಧ್ಯಾಯಗಳು ಸೇರ್ಪಡೆಗೊಂಡು 'ಬುದ್ಧ ಮತ್ತು ಅವನ ತತ್ವ' ಎಂಬ ಪುಸ್ತಕದ ಬಿಡುಗಡೆಯಾಯಿತು. ಅದೇ 'ಮುಂದೆ ಬುದ್ಧ ಮತ್ತು ಧರ್ಮ' ಎಂಬ ಹೆಸರಿನಿಂದ ಪ್ರಕಟವಾಯಿತು.

೧೯೫೬ ರ ಮೇ ತಿಂಗಳಲ್ಲಿ ಲಂಡನ್ನಿನ ಬಿ.ಬಿ.ಸಿಯಲ್ಲಿ 'ನಾನು ಬೌದ್ಧ ಮತವನ್ನೇಕೆ ಪ್ರೀತಿಸುತ್ತೇನೆ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಜಗತ್ತಿಗೆ ಅದು ಹೇಗೆ ಪ್ರಯೋಜನಕಾರಿಯಾಗಿದೆ' ಎಂಬ ವಿಷಯದಲ್ಲಿ ಭಾಷಣ ಮಾಡಿದರು. ನಾನು ಬುದ್ಧನ ಧರ್ಮವನ್ನು ಆಯ್ದುಕೊಳ್ಳುತ್ತೇನೆ. ಏಕೆಂದರೆ ಅದು ಬೇರಾವುದೇ ಧರ್ಮ ಪ್ರಾಮುಖ್ಯತೆ ಕೊಡದ ಮೂರು ಅಂಶಗಳ ಕಡೆಗೆ ಗಮನ ಹರಿಸುತ್ತದೆ. ಎಲ್ಲ ಧರ್ಮಗಳು ದೇವರು, ಆತ್ಮ, ಸಾವಿನ ನಂತರದ ಜೀವನದ ಬಗೆಗೆ ಗಮನ ಕೊಡುತ್ತದೆ. ಆದರೆ ಬೌದ್ಧಧರ್ಮ ಪ್ರಜ್ಞಾ (ತಿಳುವಳಿಕೆ), ಕರುಣ ಮತ್ತು ಸಮತಾ (ಸಮಾನತೆ)ಗೆ ಪ್ರಾಮುಖ್ಯತೆ ಕೊಡುತ್ತದೆ. ಈ ಭೂಮಿಯ ಮೇಲೆ ನೆಮ್ಮದಿಯ ಉತ್ತಮ ಜೀವನಕ್ಕೆ ಬೇಕಾಗಿರುವುದು ಇವು ಮೂರೇ. ಬೌದ್ಧಧರ್ಮದ ಈ ಮೂರು ತತ್ವಗಳ ನನ್ನನ್ನು ಆಕರ್ಷಿಸಿವೆ. ಮಾರ್ಕ್ಸ್‌ವಾದ ಮತ್ತು ಸಾಮ್ಯವಾದಗಳು ಎಲ್ಲಾ ದೇಶಗಳ ಮತೀಯ ಪದ್ಧತಿಗಳನ್ನು ಅಲ್ಲೋಲಕಲ್ಲೋಲಗೊಳಿಸಿವೆ ಎಂದರು. ಮಾರ್ಕ್ಸ್‌ವಾದ ಮತ್ತು ಸಾಮ್ಯವಾದಗಳಿಗೆ ಬೌದ್ಧಧರ್ಮವು ಪೂರ್ಣ ಉತ್ತರ ರೂಪವಾಗಿದೆಯೆಂದು ಹೇಳಿ ಅವರು 'ಸೌಮ್ಯವಾದಕ್ಕೆ ಸರಿಹೋದ ಬೌದ್ಧ ದೇಶಗಳಿಗೆ ಸೌಮ್ಯವಾದದ ಅರ್ಥವಾಗಿಲ್ಲ. ಬೌದ್ಧ ಸೌಮ್ಯವಾದವು ಅದನ್ನೂ ರಕ್ತರಹಿತ ಮಾಡುತ್ತದೆ. ಆಗ್ನೇಯ ಏಷ್ಯಾದವರು ರಷ್ಯಾದ ಬಲೆಯಲ್ಲಿ ಬೀಳದಂತೆ ಎಚ್ಚರದಿಂದಿರಬೇಕು ಅವರಿಗೆ ಅವಶ್ಯಕವಾದುದು ಏನೆಂದರೆ ಬುದ್ಧನ ಉಪದೇಶಗಳಿಗೆ ರಾಜಕೀಯ ರೂಪವನ್ನು ಕೊಡುವುದು ಮಾತ್ರ. ಬಡತನವಿದೆ ಆದರೆ ಬಡತನದ ಕಾರಣದಿಂದ ಮಾನವ ಸ್ವಾತಂತ್ರವನ್ನು ಬಲಿಕೊಡುವುದು ತರವಲ್ಲ. ಬೌದ್ಧಧರ್ಮವು ಸಾಮಾಜಿಕ ತತ್ವವೆಂದು ಮನಗಾಣಲ್ಪಡುತ್ತದೆ. ಅದರ ಪುನರುಜ್ಜೀವನವು ಶಾಶ್ವವಾಗುವುದು' ಎಂದರು.

೧೯೫೬ ರಲ್ಲಿ ಬೊಂಬಾಯಿಯ ನಾರೆ ಪಾರ್ಕಿನಲ್ಲಿ ನಡೆದ ಬುದ್ಧ ಜಯಂತಿ ಉತ್ಸವದಲ್ಲಿ ಮಾತನಾಡಿ ತಾವು ಇದೇ ಅಕ್ಟೋಬರ್ ತಿಂಗಳಲ್ಲಿ ಬೌದ್ಧಧರ್ಮ ಸ್ವೀಕಾರವನ್ನು ಮಾಡುವುದಾಗಿ ಘೋಷಿಸಿದರು. ತಮ್ಮ 'ಹಿಂದೂ ಧರ್ಮ ದೇವರಲ್ಲಿ ನಂಬಿಕೆಯಿಟ್ಟಿದೆ. ಬೌದ್ಧಧರ್ಮದಲ್ಲಿ ದೇವರಿಲ್ಲ. ಹಿಂದೂ ಧರ್ಮವು ಆತ್ಮ ಎಂಬುದರಲ್ಲಿ ವಿಶ್ವಾಸವಿಟ್ಟಿದೆ. ಬೌದ್ಧಧರ್ಮದ ಪ್ರಕಾರ ಆತ್ಮ ಎಂಬುದೇ ಇಲ್ಲ. ಹಿಂದೂ ಮತವು ಚಾತುರ್ವರ್ಣ್ಯದಲ್ಲಿ ಮತ್ತು ಜಾತಿ ಪದ್ಧತಿಯಲ್ಲಿ ವಿಶ್ವಾಸವನ್ನು ತಳೆದಿದೆ, ಬೌದ್ಧಧರ್ಮದಲ್ಲಿ ಚಾತುರ್ವಣ್ಯಕ್ಕೂ ಮತ್ತು ಜಾತಿ ಪದ್ಧತಿಗೂ ಎಡೆಯೇ ಇಲ್ಲ ಎಂದು ಅವರು ಹೇಳುತ್ತಾ, ಬೌದ್ಧಧರ್ಮದ ಮೇಲಿನ ತಮ್ಮ ಪುಸ್ತಕವು ಶೀಘ್ರದಲ್ಲಿಯೇ ಪ್ರಕಟವಾಗುವುದೆಂದು ಅವರು ತಮ್ಮ ಅನುಯಾಯಿಗಳಿಗೆ ತಿಳಿಸಿದರು. ೧೯೫೬ ಆಗಸ್ಟ್ ಮೊದಲನೆಯ ವಾರದಲ್ಲಿ ಬಾಬಾ ಸಾಹೇಬರು ಭಕ್ತರಾದ ಶಂಕರಾನಂದ ಶಾಸ್ತ್ರಿಯವರೊಂದಿಗೆ ಮಾತುಕತೆ ನಡೆಸಿ. ತಮ್ಮ ಮತಾಂತರ ಸಮಾರಂಭವನ್ನು ಬೊಂಬಾಯಿ ಸಾರಾನಾಥ್ ಅಥವಾ ನಾಗಪುರದಲ್ಲಿ ನಡೆಸುವುದಾಗಿ ತಿಳಿಸಿದರು. ಪುರಾತನ ಕಾಲದಲ್ಲಿ ಬೌದ್ಧ ನಾಗಜನಾಂಗ ಪ್ರಾಬಲ್ಯದಲ್ಲಿದ್ದ ಐತಿಹಾಸಿಕ ನಗರವಾದ ನಾಗಪುರಕ್ಕೆ ನಾನು ಈ ಬಗ್ಗೆ ಪ್ರಾಮುಖ್ಯತೆಯನ್ನು ಕೊಡುತ್ತೇನೆಂದು ನುಡಿದರು. 'ಬುದ್ಧಧರ್ಮ'ವನ್ನು ಚಕ್ರಗಳಂತೆ ಮತ್ತೊಮ್ಮೆ ಚಲಿಸುವಂತೆ ಮಾಡಿ ಜಗತ್ತಿನ ಮೂಲೆ ಮೂಲೆಗೂ ಬುದ್ಧನ ಸಂಕೇತವನ್ನು ಸಾರುತ್ತೇನೆ ಎಂದು ಹೇಳಿದರು.

ಅಕ್ಟೋಬರ್ ೧೩ ರಂದು ಅಂಬೇಡ್ಕರವರು ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ ತಮ್ಮ ಬೌದ್ಧಧರ್ಮವು ಬುದ್ಧ ಪ್ರಭುವು ಸ್ವಂತವಾಗಿ ಉಪದೇಶಿಸಿದ ತತ್ವಗಳಿಗನುಗುಣವಾಗಿರುವುದೆಂದೂ ತಮ್ಮ ಜನಗಳನ್ನು ಹೀನಾಯಾನ ಮತ್ತು ಮಹಾಯಾನಗಳಿಂದುಂಟಾದ ವ್ಯತ್ಯಾಸಗಳ ಗೊಂದಲದಲ್ಲಿ ಕೆಡಹುದ್ದಿಲ್ಲವೆಂದೂ ಪತ್ರಕರ್ತರಿಗೆ ತಿಳಿಸಿದರು. ದೇಶಕ್ಕೆ ನನ್ನಿಂದಾಗುತ್ತಿರುವ ಅತ್ಯಧಿಕ ಲಾಭವೆಂದರೆ ನಾನು ಹಾಗೆ ಮತಾಂತರ ಹೊಂದುತ್ತಾ ಬೌದ್ಧಧರ್ಮವನ್ನು ಸೇರುತ್ತಿರುವುದು. ಏಕೆಂದರೆ ಬೌದ್ಧ ಧರ್ಮವು ಭಾರತೀಯ ಸಂಸ್ಕೃತಿಯ ಒಂದು ಖಂಡ ಮತ್ತು ಭಾಗವೇ ಆಗಿದೆ. ನನ್ನ ಮತಾಂತರವು ಈ ದೇಶದ ಇತಿಹಾಸಕ್ಕೆ, ಸಂಸ್ಕೃತಿಗೆ ಮತ್ತು ಸಂಪ್ರದಾಯಕ್ಕೆ ಧಕ್ಕೆ ತರದಂತೆ ನಾನು ಎಚ್ಚರ ವಹಿಸಿದ್ದೇನೆ ಎಂದು ಘೋಷಿಸಿದರು. ೧೯೫೬ ಅಕ್ಟೋಬರ್ ೧೪ರಂದು ಕುಷಿನಾರದ ೮೩ ವರ್ಷ ವಯಸ್ಸಿನ ಮಹಸ್ಥವೀರ ಚಂದ್ರಮಣಿಯವರು ಅಂಬೇಡ್ಕರ್ ದಂಪತಿಗಳಿಗೆ ಪಂಚಶೀಲವನ್ನು ಪಂಚಸೂತ್ರವನ್ನು ಬೋಧಿಸಿದರು. ಪಾಳಿ ಮಂತ್ರವನ್ನು ಮರಾಠಿಯಲ್ಲಿ ಉಚ್ಚರಿಸಲಾಯಿತು. ಬುದ್ಧನ ವಿಗ್ರಹಕ್ಕೆ ನಮಸ್ಕರಿಸಿದರು. ಅಸಮಾನತೆ ಮತ್ತು ದಬ್ಬಾಳಿಕೆಯಿಂದ ಕೂಡಿದ್ದ ನನ್ನ ಪುರಾತನ ಧರ್ಮವನ್ನು ಪರಿತ್ಯಜಿಸಿ, ನಾನಿಂದು ಪುನರ್ಜನ್ಮವನ್ನು ಪಡೆದಿದ್ದೇನೆ ನಾನು ಹಿಂದೂ ದೇವರ ಭಕ್ತನಲ್ಲ, ನಾನು ಶ್ರಾದ್ಧವನ್ನು ಮಾಡುವುದಿಲ್ಲ ಎಂದರು. ನಾನು ಬುದ್ಧನ ಅಷ್ಟಾಂಗ ಮಾರ್ಗವನ್ನು ನಿಷ್ಠೆಯಿಂದ ಅನುಸರಿಸುತ್ತೇನೆ. ಬೌದ್ಧಧರ್ಮವು ಸತ್ಯವಾದ ಧರ್ಮವಾಗಿದೆ ಮತ್ತು ನಾನು ಜ್ಞಾನ, ಸರಿಯಾದ ಮಾರ್ಗ ಮತ್ತು ಕರುಣೆಯೆಂಬ ತ್ರಿಸೂತ್ರಗಳಿಂದ ಕೂಡಿದ ಜೀವನವನ್ನು ನಡೆಸುವೆನು ಎಂದು ಪ್ರಮಾಣ ಮಾಡಿದರು. ಬೌದ್ಧರಾದ ಅಂಬೇಡ್ಕರ್‌ರು ಬೌದ್ಧಧರ್ಮ ಸ್ವೀಕಾರ ಮಾಡಬಯಸುವವರೆಲ್ಲಾ ಎದ್ದು ನಿಲ್ಲಿರೆಂದರು. ಇಡೀ ಸಭೆಯೇ ಎದ್ದು ನಿಂತಿತು. ಆಗ ಅವರು ೮ ಲಕ್ಷ ಜನರಿಗೆ ತಿಸರಣ ಪಂಚಶೀಲಗಳನ್ನು ಬೋಧಿಸಿ ಅವರನ್ನು ಬೌದ್ಧಧರ್ಮೀಯರನ್ನಾಗಿ ಮಾಡಿದರು.

ಅಂಬೇಡ್ಕರ್‌ರು ಬೌದ್ಧಧರ್ಮ ಸ್ವೀಕಾರದ ನಂತರ ಬೌದ್ಧ ಲೇಖಕರೊಬ್ಬರು ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದರು ಬೌದ್ಧ ದೃಷ್ಟಿಯಲ್ಲಿ ಈ ಮಹಾ ಮತಾಂತರವು ಆಧುನಿಕ ಭಾರತ ಇತಿಹಾಸದ ಹೊಸ ಅಧ್ಯಾಯವಾಗಿತ್ತು. 'ಈ ಮಾರ್ಪಾಡುಗಳನ್ನು ವರ್ಣಿಸುವಾಗ ಮತಾಂತರ ಎಂಬ ಪದವು ಅಷ್ಟೊಂದು ಸಮಂಜಸವಲ್ಲ ಏಕೆಂದರೆ ಮತಾಂತರ ಎಂದ ಕೂಡಲೇ ಬಲತ್ಕಾರ ಮತ್ತು ಪ್ರಲೋಭಗಳು ಅದರೊಡನಿರುತ್ತವೆಂಬುದು ಮನಕ್ಕೆ ಬರುತ್ತದೆ' ಎಂದು. ಆದರೆ ಅದು ಸ್ವಪರಿವರ್ತನವೇ ಹೊರತು ತನ್ನ ಧರ್ಮವನ್ನು ಪರಿತ್ಯಜಿಸಿ ಪರ ಧರ್ಮವೊಂದರನ್ನು ಆಶ್ರಯಿಸುವ ಅರ್ಥದ ಮತಾಂತರವಲ್ಲ. 'ಆ

ಮಹಾನಾಯಕರಿಂದ ಧರ್ಮ ಚಕ್ರದ ಆರಂಭ ಮತ್ತು ಅದು ಆಧುನಿಕ ಕಾಲದಲ್ಲಿ ಭಾರತವು ಕಂಡ ಮತೀಯ ಮಹಾ ಕ್ರಾಂತಿ' ಎಂದು ಇತರ ಬೌದ್ಧರು ಅಭಿಪ್ರಾಯಪಟ್ಟರು.

ದೆಹಲಿಗೆ ಬಂದು ತಲುಪಿದ ಅಂಬೇಡ್ಕರವರಿಗೆ ಬೌದ್ಧಧರ್ಮದ ಪುನರುಜ್ಜೀವನವನ್ನು ಸಂಸ್ಥಾಪಿಸಿದ ದಿವ್ಯ ತೃಪ್ತಿಯು ಉಂಟಾಗಿತ್ತು. ಬೌದ್ಧಧರ್ಮದ ಪುನರುಜ್ಜೀವನವು ಭಾರತದಲ್ಲಿಯ ಸಂಭವನೀಯ ಸಂಗತಿಗಳಲ್ಲೊಂದು ನಾನು ಮತ್ತೊಮ್ಮೆ ಹೇಳುತ್ತೇನೆ ಎಂದು ೧೮೮೧ ರಷ್ಟು ಮುಂಚೆಯೆ ಸರ್. ವಿಲಿಯಂ ಹಂಟರ್‌ರವರು ನುಡಿದಿದ್ದ ಭವಿಷ್ಯವಾಣಿಯನ್ನು ಸಾರ್ಥಕಗೊಳಿಸಿದ್ದರು.

ತನ್ನ ವೈಜ್ಞಾನಿಕ ನೀತಿ ಸಂಹಿತೆಗಳಿಂದಾಗಿಯೇ ಮಾನವತಾ ಧರ್ಮವಾದ 'ಧಮ್ಮ'ವು ನಮ್ಮೆಲ್ಲರನ್ನೂ ಇಂದಿಗೂ ಮತಾತೀತವಾಗಿ ಸೆಳೆದು ಒಟ್ಟುಗೂಡಿಸುವ ಶಕ್ತಿಯನ್ನು ಪಡೆದುಕೊಂಡಿದೆ. ಭಾರತೀಯರ ಏಕತೆಗೆ ಪ್ರಜಾಸತ್ತಾತ್ಮಕ 'ಧಮ್ಮ'ವೇ ಪರ್ಯಾಯ ಮಾರ್ಗವೆಂದು ಅಂಬೇಡ್ಕರ್ ಚೆನ್ನಾಗಿ ಅರಿತುಕೊಂಡಿದ್ದರು. ಅಂತೆಯೇ ೨೦ನೇ ಶತಮಾನದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬುದ್ಧನ ಧಮ್ಮವನ್ನು ಪುನರುತ್ಥಾನಗೊಳಿಸಲು ಹಾಗು ಈ ದೇಶದ ತಳಜೀವಿಗಳನ್ನು ಸಾಮಾಜಿಕವಾಗಿ ವಿಮೋಚಿಸಲು ಹೋರಾಡಿದ ಮಹಾನ್ ನಾಯಕರಾಗುತ್ತಾರೆ.

**ಪರಾಮರ್ಶನ ಗ್ರಂಥಗಳು**


1. ಅನುಪಮಾ ಎಚ್.ಎಸ್. (೨೦೧೨), ಭೀಮಯಾನ, ಗದಗ, ಲಡಾಯಿ ಪ್ರಕಾಶನ
2. ಅಂಬೇಡ್ಕರ್ ಬಿ.ಆರ್ (೨೦೧೩), ಭಗವದ್ಗೀತೆ ತ/ ಬೌದ್ಧತತ್ವ, ಗದಗ, ಲಡಾಯಿ ಪ್ರಕಾಶನ.
3. ಕುಮಾರಯ್ಯ ಡಿ.ಕೆ. (೨೦೧೧), ಬುದ್ಧ ಮತ್ತು ಧಮ್ಮ, ಹೊಳೆನರಸೀಪುರ, ಗೋಕುಲ್ ಪ್ರಕಾಶನ.
4. ಕುಮಾರಯ್ಯ ಡಿ.ಕೆ. (೨೦೧೪), ಡಾ.ಬಾಬಾಸಾಹೇಬ್ ಅಂಬೇಡ್ಕರ್, ಹೊಳೆನರಸೀಪುರ, ಗೋಕುಲ್ ಪ್ರಕಾಶನ.
5. ಕೃಷ್ಣಯ್ಯ ಎಂ.ಡಿ (೧೯೯೭), ಬೌದ್ಧೀಯತೆ, ಮೈಸೂರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ
6. ಕೃಷ್ಣಯ್ಯ ಎ.ಡಿ. (೧೯೯೬) ಅಂಬೇಡ್ಕರವರ ಬುದ್ಧ ಮತ್ತು ಆತನ ಧಮ್ಮ ಮೈಸೂರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ
7. ಬೇನಾಳ ಎಚ್.ಎಸ್. (೨೦೧೫), ಮೋಕ್ಷವಾದ ಮತ್ತು ಅಂಬೇಡ್ಕರ್‌ವಾದ, ಗುಲಬರ್ಗಾ, ಸಹನಾ ಪ್ರಕಾಶನ
8. ಮಹಾದೇವಿ, ಒಡೆಯರ್. ಡಿ. ಹೆಗ್ಗಡೆ (೨೦೦೯), ಧರ್ಮ, ಮೈಸೂರು, ಮಾನವಾಭಿವೃದ್ಧಿ ಅಧ್ಯಯನ ಕೇಂದ್ರ
9. ಮುನಿವೆಂಕಟಪ್ಪ ವಿ. (೨೦೧೨), ವಿಶ್ವಚೇತನ ಬುದ್ಧ, ಮೈಸೂರು, ಪಂಚಮ ಪ್ರಕಾಶನ
10. ಮುನಿವೆಂಕಟಪ್ಪ ವಿ. (೨೦೧೦), ಬುದ್ಧಭಾರತ, ಮೈಸೂರು, ವಾಣಿಪ್ರಕಾಶನ
11. ರಾಜಶೇಖರಯ್ಯ ಎ.ಎಂ. (೧೯೯೮), ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂಪುಟ ೭, ೮ ಮತ್ತು ೯, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
12. ವಡ್ಡಗೆರೆ ನಾಗರಾಜಯ್ಯ (ಸಂ) (೨೦೧೧), ಧಮ್ಮಯಾನ, ಬೆಂಗಳೂರು, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್. ವೆಂಕಟೇಶ್ ಹೆಚ್ (೧೯೯೩), ಬೌದ್ಧಮತ ಮತ್ತು ಬಿ.ಆರ್. ಅಂಬೇಡ್ಕರ್, ಬೆಂಗಳೂರು, ಎಸ್. ಬಿ. ಎಸ್. ಪಬ್ಲೀಷರ್ಸ್ ಡಿಸ್ಟ್ರಿಬ್ಯೂಟರ್ಸ್